# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕನ್ನಡ ಇಲಾಖಾ ಪರೀಕ್ಷೆಗಳು – ಮಾರ್ಚ್ 2015

## ಕನ್ನಡ ಭಾಷಾ ಪರೀಕ್ಷೆ – ಪತ್ರಿಕೆ 1

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

**ದಿನಾಂಕ: 28.03.2015** | **ಗರಿಷ್ಟ ಅಂಕಗಳು – 100** | **ಸಮಯ: ಬೆಳಿಗ್ಗೆ 9.30 ರಿಂದ 11.30 ರವರೆಗೆ**

---

**1. ಇವುಗಳಲ್ಲಿ ಯಾವುದಾದರೂ ಐದಕ್ಕೆ ಯಾವ ಪಾಠದಿಂದ? ಯಾರು? ಯಾರಿಗೆ? ಯಾವ ಸಂದರ್ಭದಲ್ಲಿ ಹೇಳಿದರು? ವಿವರಿಸಿ.** **20 ಅಂಕಗಳು**

ಅ) ಸ್ವಾಮಿ, ನನಗೆ ಮುದುಕಿಯಾದ ತಾಯಿ ಒಬ್ಬಳಿದ್ದಾಳೆ. ಅವಳನ್ನು ನೋಡಬೇಕು ಎಂದನು.

ಆ) ಈ ದಿನ ಮಧ್ಯಾಹ್ನ ನಮ್ಮ ತಂದೆ ಒಂದು ಮಗು ಹೆತ್ತರು! ಗಂಡು ಮಗು ಬಹಳ ಚೆನ್ನಾಗಿದೆ.

ಇ) ಅವೆಲ್ಲಾ ಸಾಧ್ಯವಿಲ್ಲ. ಕೊಟ್ಟೆ ಮುಂದಕ್ಕೆ ಹೋಗಬೇಕು.

ಈ) ಬೇಕಾದರೆ ನೀನೊಬ್ಬನೇ ಮಾಡು ನಾವು ಹೋಗುತ್ತೇವೆ.

ಉ) ನಾನು ಬಾಯಾರಿಕೆಯಿಂದ ಬಹಳ ಬಳಲಿದವನಾಗಿದ್ದೇನೆ. ನನಗೆ ಇಲ್ಲಿ ಸ್ವಲ್ಪ ನೀರು ಸಿಗಬಹುದೇ?

ಊ) "ನನ್ನದೇನು ಅಭ್ಯಂತರವಿಲ್ಲ. ಪಂಚಾಯಿತಿಯ ಮುಂದೆ ಶತ್ರು ಮಿತ್ರರೆಂಬ ಭೇದ ಭಾವ ಇರಲ್ಲ'

ಋ) "ಎತ್ತು ಎಲ್ಲಿಯಾದರೂ ಹಾಲು ಕೊಡುತ್ತದೆಯೇ? ಹಕೀಮ್?"

**2. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡಕ್ಕೆ ಒಂದು ಪುಟ ಮೀರದಂತೆ ವಿವರಣೆ ಬರೆಯಿರಿ.** **20 ಅಂಕಗಳು**

ಅ) ಅವನು ದಯೇ ತೋರಿದ

ಆ) ನಮ್ಮ ಬಾವುಟ

ಇ) ಒಳ್ಳೆಯ ಮಾತು

**3. ಈ ಕೆಳಗಿನ ಯಾವುದಾದರೂ ಐದಕ್ಕೆ ವಿರುದ್ಧ ಪದ ಬರೆಯಿರಿ.** **5 ಅಂಕಗಳು**

ಅ) ಚಿಕ್ಕದು ಆ) ರಾತ್ರಿ ಇ) ಸೋಲು ಈ) ಜಾಣ

ಉ) ಪ್ರಖ್ಯಾತ ಊ) ಪ್ರಾರಂಭ ಋ) ಹಿರಿಯ

**4. ಈ ಕೆಳಗಿನ ಅಂಕಿಗಳನ್ನು ಅಕ್ಷರಗಳಲ್ಲಿ ಬರೆಯಿರಿ (5 ಕ್ಕೆ ಮಾತ್ರ).** **5 ಅಂಕಗಳು**

ಅ) 31,102 ಆ) 1,00,397 ಇ) 5,45,368 ಈ) 69,99,399

ಉ) 12,34,56,102 ಊ) 12,42,658 ಋ) 17,798

**5. ಈ ಕೆಳಗಿನವುಗಳನ್ನು ಅಂಕಿಯಲ್ಲಿ ಬರೆಯಿರಿ (5 ಕ್ಕೆ ಮಾತ್ರ).** **5 ಅಂಕಗಳು**

ಅ) ಐದು ನೂರಾ ಅರವತ್ತೆಂಟು

ಆ) ನಲವತ್ತೈದು ಸಾವಿರದ ಆರು ನೂರ ನಲವತ್ತಾರು

ಇ) ಎಂಟು ಸಾವಿರದ ಐವತ್ತೆರಡು

www.shikarat.com

ಈ) ಎರಡು ಕೋಟಿ ಎಂಟು ಲಕ್ಷದ ಎಪ್ಪತ್ತೆರಡು ಸಾವಿರದ ಆರು ನೂರ ಮೂವತ್ತೈದು
ಉ) ಒಂದು ಲಕ್ಷದ ಐವತ್ತು ಸಾವಿರ
ಊ) ಏಳು ಕೋಟಿ ಎಪ್ಪತ್ತೈದು ಲಕ್ಷದ ಮೂರು ಸಾವಿರದ ಆರು ನೂರಾ ಎರಡು.
ಋ) ಎಂಟು ಸಾವಿರದ ಹನ್ನೆರಡು

**6. ಈ ಕೆಳಗಿನ ಪದಗಳ ಬಹುವಚನ ರೂಪಗಳನ್ನು ಬರೆಯಿರಿ (5 ಕ್ಕೆ ಮಾತ್ರ). 5 ಅಂಕಗಳು**

ಅ) ಗೆಳತಿ ಆ) ಮೇಜು ಇ) ಉಪಾಧ್ಯಾಯ ಈ) ಅವನು
ಉ) ತಾಯಿ ಊ) ವಾಹನ ಋ) ದೀಪ

**7. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. 5 ಅಂಕಗಳು**

ಅ) ದಕ್ಷಿಣ ಪಥೇಶ್ವರ – ಕರ್ನಾಟಕದವನು

ಆ) ರಾಮಾಯಣದ ವಿರಾಂಜನೇಯ – ಕಲೆಗೆ ಹೆಸರುವಾಸಿಯಾಗಿದೆ.

ಇ) ಸಂಗೊಳ್ಳಿ ರಾಯಣ್ಣ – ವೇದದ ಘೋಷ

ಈ) ಕರ್ನಾಟಕ – ದೇಶ ಪ್ರೇಮಿ ವೀರ

ಉ) ಜನನಿಯ ಜೋಗುಳ – ಚಾಲುಕ್ಯ ಎರಡನೇ ಪುಲಕೇಶಿ

**8. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ 5 ಕ್ಕೆ ಉತ್ತರವನ್ನು ಬರೆಯಿರಿ. 10 ಅಂಕಗಳು**

ಅ) ರಾಮಯ್ಯನ ಚಿಕ್ಕಮ್ಮ ಪಂಚಾಯಿತಿ ಸೇರಿಸಲು ಕಾರಣವೇನು?
ಆ) ತೋಟದಲ್ಲಿದ್ದ ಬಕೀಟುಗಳಲ್ಲಿ ನೀರು ಸೇದಿ ಹಾಕಿದರು ಏಕೆ ಅವು ತುಂಬಲಿಲ್ಲ?
ಇ) ರಾಜವರ್ಮರು ಬರೆಯುತ್ತಿದ್ದ ಮಹಾವಿಷ್ಣುವಿನ ಚಿತ್ರ ಅಪೂರ್ಣವಾಗಿರುವುದನ್ನು ಕಂಡ ಬಾಲಕ ರವಿವರ್ಮನು ಏನು ಮಾಡಿದನು?
ಈ) ಜಾನ್ ಕಟ್ಟೆಯ ಸಂಧಿಯಿಂದ ಬರುತ್ತಿದ್ದ ನೀರನ್ನು ತಡೆಯಲು ಏನು ಮಾಡಿದನು?
ಉ) ಕರ್ನಾಟಕದ ಜೀವ ನದಿಗಳು ಯಾವುವು? ಕರ್ನಾಟಕವನ್ನು ಗಂಧದ ಗುಡಿ ಎಂದು ಏಕೆ ಕರೆಯುತ್ತಾರೆ?
ಊ) ಬೀರಬಲ್ಲನ ವಿರುದ್ಧ ಸೇಡು ತೀರಿಸಿಕೊಳ್ಳಲು ಹಕೀಮನು ಯಾವ ಉಪಾಯ ಹೂಡಿದ?
ಋ) ನಾಲ್ಕನೆಯ ವ್ಯಕ್ತಿಯನ್ನು ಯಾವ ಕಾರಣಕ್ಕಾಗಿ ರಾಜನು ಅರಮನೆಯ ಮುಖ್ಯ ಕಾವಲುಗಾರನನ್ನಾಗಿ ನೇಮಕ ಮಾಡಿದನು?

**9. ಈ ಕೆಳಗಿನ ಪದಗಳಿಗೆ ವಿರುದ್ಧ ಲಿಂಗ ಬರೆಯಿರಿ (5 ಕ್ಕೆ ಮಾತ್ರ). 5 ಅಂಕಗಳು**

ಅ) ಕವಿ ಆ) ಸ್ನೇಹಿತ ಇ) ಹಸು ಈ)ಸಿಂಹ

ಉ) ಶಿಕ್ಷಕ ಊ) ಹೆಂಗಸು ಋ) ಲೇಖಕ

www.shikarat.com

www.shikarat.com

SHIKARAT
Online Education

## For more contact us

**Instagram**
https://www.instagram.com/shikarat_com/

**Telegram**
https://telegram.me/shikarat

**Facebook**
https://www.facebook.com/shikarat/

**Twitter**
https://twitter.com/Shikarat_com

**Pinterest**
https://in.pinterest.com/shikarat_com/

**Website**
www.shikarat.com

**Email**
Admin@shikarat.com

SHIKARAT
Online Education

❤ **Sharing is Caring** ❤

😍If it is helpful Please Share with your friends😍

www.shikarat.com

**10. ಈ ಕೆಳಗಿನ ಯಾವುದಾದರೂ ಐದಕ್ಕೆ ಸಮಾನಾರ್ಥ ಪದ ಬರೆಯಿರಿ.** **10 ಅಂಕಗಳು**

ಅ) ಗಂಡಿಗೆ ಆ) ವ್ಯಾಘ್ರ ಇ) ಅಪಮಾನ ಈ) ನೀಗು

ಉ) ಚೊಕ್ಕಟ ಊ) ಅವಶೇಷ ಋ) ಬೋಧಿಸು

**11. ಈ ಪಾಠವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ .** **10 ಅಂಕಗಳು**

**ಕಾಪಿ ಮಾಡುವುದು ಕೆಟ್ಟದ್ದು**

ಮಹಾತ್ಮಾ ಗಾಂಧೀಜಿಯವರ ಹೆಸರನ್ನು ಎಲ್ಲರೂ ಕೇಳಿದ್ದೀರಿ. ಅವರು ಭಾರತದ ರಾಷ್ಟ್ರಪಿತ. ಅವರ ಮಾರ್ಗದರ್ಶನದಿಂದ, ಮುಂದಾಳುತನದಿಂದ ಭಾರತ ಸ್ವಾತಂತ್ರ್ಯವನ್ನು ಪಡೆಯಿತು. ಅವರ ಎರಡು ಮುಖ್ಯ ಅಸ್ತ್ರಗಳು ಸತ್ಯ ಮತ್ತು ಅಹಿಂಸೆ.

'ಬೆಳೆಯುವ ಪೈರು ಮೊಳಕೆಯಲ್ಲಿಯೇ' ಎನ್ನುವಂತೆ ದೊಡ್ಡವರ ಗುಣ ಬಾಲ್ಯದಲ್ಲಿಯೇ ಕಂಡು ಬರುತ್ತವೆ. ಅಂತೆಯೇ ಗಾಂಧೀಜಿಯವರು ಬಾಲ್ಯದಿಂದಲೂ ಎಷ್ಟು ಸತ್ಯವಂತರೂ, ನೀತಿವಂತರೂ ಆಗಿದ್ದರೆಂಬುದಕ್ಕೆ ಇದು ಉದಾಹರಣೆ.

ಗಾಂಧೀಜಿಯವರು ಮಾಧ್ಯಮಿಕ ಶಾಲೆಯಲ್ಲಿ ಒದುತ್ತಿದ್ದಾಗ ಶಾಲೆಯ ತನಿಕಾಧಿಕಾರಿಗಳು ತನಿಕೆಗಾಗಿ ಬಂದಿದ್ದರು. ಅವರು ಇವರ ತರಗತಿಯನ್ನು ಪರೀಕ್ಷಿಸಲು ಬಂದಾಗ ತರಗತಿಯ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಉಕ್ತಲೇಖನ ಬರೆಸಿದರು. ಅದರಲ್ಲಿ 'ಕೆಟಲ್' (kettle) ಎಂಬ ಪದವನ್ನು ಗಾಂಧೀಜಿ ತಪ್ಪಾಗಿ ಬರೆದಿದ್ದರು. ಉಪಾಧ್ಯಾಯರು ಇದನ್ನು ಗಮನಿಸಿ ಮುಂದಿನ ಹುಡುಗನ ಸ್ಲೇಟನ್ನು ನೋಡಿ ಅದನ್ನು ಸರಿಮಾಡಿಕೊಳ್ಳುವಂತೆ ಸೂಚಿಸಿದರು. ಆದರೆ ಗಾಂಧೀಜಿ ಹಾಗೆ ಮಾಡಲಿಲ್ಲ. ಕಾಪಿಮಾಡುವುದು ಅವರಿಗೆ ಒಪ್ಪಿಗೆಯಾಗಲಿಲ್ಲ., ಬೇರೆಯವರದ್ದೆಲ್ಲಾ ಸರಿಯಾಗಿದ್ದು ಇವರೊಬ್ಬರದೇ ತಪ್ಪಾಗಿತ್ತು. ಅಧಿಕಾರಿಗಳು ಹೊರಟು ಹೋದ ನಂತರ ಉಪಾಧ್ಯಾಯರು ಇವರ ಸಂಜ್ಞೆಯನ್ನರಿತು ಕಾಪಿ ಮಾಡಲಾರದ ದಡ್ಡ ಎಂದರಂತೆ. ಆದರೆ ಗಾಂಧೀಜಿ " ನಾನು ದಡ್ಡನಾದರೂ ಚಿಂತೆಯಿಲ್ಲ ಕಾಪಿ ಮಾಡುವುದು ಕೆಟ್ಟದ್ದು ಎಂಬುದು ನನಗೆ ಚೆನ್ನಾಗಿ ಗೊತ್ತು" ಎಂದರಂತೆ.

ನೋಡಿ, ಬಾಲ್ಯದಲ್ಲೇ ಅವರಲ್ಲಿ ಎಂಥ ದೊಡ್ಡ ಗುಣವಿತ್ತು. ಆದ್ದರಿಂದ ದೊಡ್ಡವರಾದ ಮೇಲೆ ಮಹಾತ್ಮರೆನಿಸಿಕೊಳ್ಳಲು ಸಾಧ್ಯವಾಯಿತು.

1) ಗಾಂಧೀಜಿ ಯಾರು? ಅವರು ಮಾಡಿದ ಮಹತ್ಕಾರ್ಯವೇನು?
2) ಶಾಲಾ ತನಿಕಾಧಿಕಾರಿಗಳು ತರಗತಿಯನ್ನು ಹೇಗೆ ಪರೀಕ್ಷಿಸಿದರು?
3) ಗಾಂಧೀಜಿಯವರು ಉಪಾಧ್ಯಾಯರ ಸೂಚನೆಯಂತೆ ಮುಂದಿನ ವಿದ್ಯಾರ್ಥಿಯ ಸ್ಲೇಟನ್ನು ನೋಡಿ ಏಕೆ ತಿದ್ದಿಕೊಳ್ಳಲಿಲ್ಲ?
4) ಗಾಂಧೀಜಿಯವರಲ್ಲಿ ಬಾಲ್ಯದಿಂದಲೇ ಇದ್ದ ಸದ್ಗುಣಗಳಾವುವು?

* * * * *

www.shikarat.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕನ್ನಡ ಇಲಾಖಾ ಪರೀಕ್ಷೆಗಳು – ಮಾರ್ಚ್ 2015

## ಕನ್ನಡ ಭಾಷಾ ಪರೀಕ್ಷೆ – ಪತ್ರಿಕೆ – 2

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

ದಿನಾಂಕ: 28.03.2015 | ಗರಿಷ್ಟ ಅಂಕಗಳು – 50 | ಸಮಯ: 12.00 ರಿಂದ 1.00 ರವರೆಗೆ

---

**1. ಆಂಗ್ಲ ಭಾಷೆಗೆ ಅನುವಾದಿಸಿ:** **10 ಅಂಕಗಳು**

ಭಾರತ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005 ದಿನಾಂಕ: 12.10.2005 ರಿಂದ ಜಾರಿಗೆ ಬಂದಿರುತ್ತದೆ. ಈ ಅಧಿನಿಯಮದ ಮುಖ್ಯ ಉದ್ದೇಶ ಆಡಳಿತದಲ್ಲಿ ಪಾರದರ್ಶಕತೆ, ಮುಕ್ತತೆ ಹಾಗೂ ಸಾರ್ವಜನಿಕ ಪ್ರಾಧಿಕಾರಗಳಲ್ಲಿ ಹೊಣೆಗಾರಿಕೆ ಉಂಟುಮಾಡುವುದು. ಸರ್ಕಾರ ಹಾಗೂ ಅದರ ಅಧಿಕಾರಿಗಳ ಕರ್ತವ್ಯ ನಿರ್ವಹಣೆಯಲ್ಲಿ ಬದಲಾವಣೆ ತರಲು ಮಾಹಿತಿ ಹಕ್ಕು ಅಧಿನಿಯಮವು ಒಂದು ಪ್ರಮುಖ ಸಾಧನವಾಗಿದೆ.

ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಪ್ರಜೆಗಳು ಸಾರ್ವಜನಿಕ ಪ್ರಾಧಿಕಾರಗಳ ಬಳಿಯಲ್ಲಿ ಲಭ್ಯವಿರುವ ಮಾಹಿತಿಯನ್ನು ಪಡೆಯಲು ಅವಕಾಶವನ್ನು ಕಲ್ಪಿಸುವ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಕಾಪಾಡಲು ಸಾಧ್ಯವಾಗುತ್ತಿದೆ. ಪ್ರತಿ ಸಾರ್ವಜನಿಕ ಪ್ರಾಧಿಕಾರವು ಆಡಳಿತ ಘಟಕ ಅಥವಾ ಕೇಂದ್ರ ಕಛೇರಿಯಲ್ಲಿ ಮಾಹಿತಿಯನ್ನು ಒದಗಿಸಲು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ನೇಮಕ ಮಾಡಬೇಕಾಗಿರುತ್ತದೆ ಸಾರ್ವಜನಿಕ ಮಾಹಿತಿ ಅಧಿಕಾರಿ /ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಅರ್ಜಿದಾರರು ಕೋರಿದ ಮಾಹಿತಿ ಒದಗಿಸಲು ಹಾಗೂ ಮಾಹಿತಿ ಕೋರುವ ವ್ಯಕ್ತಿಗಳಿಗೆ ಅಗತ್ಯ ನೆರವು ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**2. ಈ ಕೆಳಗಿನ ಪದಗಳಲ್ಲಿ ಯಾವುದಾದರೂ 10 ನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿ:** **10 ಅಂಕಗಳು**

| | | |
|---|---|---|
| (೧) ಜ್ಯೇಷ್ಠತಾಪಟ್ಟಿ | (೨) ಅಧಿಕ ವೇತನ ಬಡ್ತಿ | (೩) ವಾರ್ಷಿಕ ವೇತನ ಬಡ್ತಿ |
| (೪) ಆಯವ್ಯಯ ಪಟ್ಟಿ | (೫) ವೃತ್ತಿ ತೆರಿಗೆ | (೬) ವೈದ್ಯಕೀಯ ವೆಚ್ಚ ಮರುಪಾವತಿ |
| (೭) ಬಡ್ಜೆಟ್ ಅನುದಾನ | (೮) ವಿಷಯ ನಿರ್ವಾಹಕ | (೯) ನಗದು ಶಿಲ್ಕು |
| (೧೦) ಅತಿಥಿಗೃಹ | (೧೧) ಕಡ್ಡಾಯ ನಿವೃತ್ತಿ | (೧೨) ವಾಹನ ಭತ್ಯೆ |

**3. <u>ಈ ವಾಕ್ಯಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸುವುದು:</u>** **5 ಅಂಕಗಳು**

ಅ) ನೌಕರರ ಸೇವಾ ನಿಯಮಗಳು ದಿನಾಂಕ: 01.01.1966 ರಿಂದ ಜಾರಿಗೆ ಬಂದಿರುತ್ತದೆ.

(ಆ) ಅಧಿಕೃತ ಸಾರ್ವಜನಿಕ ರಜೆ ದಿನಗಳಂದು ಕೆಲಸ ನಿರ್ವಹಿಸುವ ನೌಕರರಿಗೆ ದ್ವಿಗುಣ ವೇತನ ಪಾವತಿಸಲಾಗುವುದು.

(ಇ). ಆದೇಶವನ್ನು ಸಾರ್ವಜನಿಕ ಹಿತಾಸಕ್ತಿಯಿಂದ ಹೊರಡಿಸಲಾಗಿದೆ.

(ಈ). ಸ್ವಯಂ ನಿವೃತ್ತಿ ಹೊಂದಲಿಚ್ಛಿಸುವ ನೌಕರರು ಮನವಿಯನ್ನು ಮೂರು ತಿಂಗಳು ಮುಂಚಿತವಾಗಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

(ಉ). ಧೂಮಪಾನ ಮಾಡುವುದನ್ನು ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿದೆ.

www.shikarat.com

4. ಕನ್ನಡ ಭಾಷೆಗೆ ಭಾಷಾಂತರಿಸಿ: **10 ಅಂಕಗಳು**

Kuppalli Venkatappa Puttappa popularly known by the pen name Kuvempu or by K. V. Puttappa, was a Kannda novelist, poet, playwright, critic and thinker. He is widely regarded as the greatest Kannada poet of the 20th century. He is the first among Kannada writers to be decorated with the prestigious Jnanapeeta Award. For his contributions to Kannada literature, the Government of Karnataka decorated him with the honorific Rashtrakavi in 1958 and Karnataka Ratna in 1992. He was conferred the Padma Vibhushan by Government of India in 1988. He penned the Karnataka State anthem Jaya Bharata Jananiya Tanujate.

5. ಈ ಕೆಳಗಿನ ಪದಗಳಲ್ಲಿ ಯಾವುದಾದರೂ 10ನ್ನು ಕನ್ನಡ ಭಾಷೆಗೆ ಅನುವಾದಿಸಿ: **10 ಅಂಕಗಳು**

1) Accident grants
2) Voluntary retirement.
3) Service Station
4) Dearness allowance
5) Probationary period
6) Last pay certificate
7) In charge Arrangement
8) Head quarters
9) Closing Balance
10) Extraordinary leave
11) Confidential report
12) Energy Charges

6. ಈ ವಾಕ್ಯಗಳನ್ನು ಕನ್ನಡಕ್ಕೆ ಅನುವಾದಿಸಿ: **5 ಅಂಕಗಳು**

1) Healthy foods have a variety of nutrients that help us to grow and remain strong.
2) Avoid keeping the refrigerator door open unnecessarily.
3) Non receipt of the bill by the consumer is not a valid reason for non payment.
4) Always use ISI certified appliances, wires and cables.
5) Pollution affects our health in many ways. Air pollution may cause Asthma, Heart and Lung diseases.

********

www.shikarat.com